ತಾವೇನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ.ಎಸ್.ಪಾಟೀಲ್:- ಬಡ ನೇಕಾರರಿಗೆ ಮನೆಗಳನ್ನು ಹಾಗೂ ಕಾರ್ಯಾಗಾರ ನಿರ್ಮಿಸುವ ಯೋಜನೆ ಎಲ್ಲಿ ಬಿಟ್ಟು ಹೋಗಿದೆಯೋ ಅಲ್ಲಿ, ವಿಶೇಷವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಕೆಲವೊಂದು ಕಡೆಯಿಂದ ಅಪ್ಲಿಕೇಷನ್ ಬಂದಿಲ್ಲ. ಈ ಅಪ್ಲಿಕೇಷನ್ ಬರದೇ ಇರುವ ಕಡೆಗಳಲ್ಲಿ ಕೆಲವೊಂದು ಬಿಟ್ಟುಹೋಗಿವೆ. ಏಕೆ ಕೆಲವು ಜಿಲ್ಲೆಗಳಿಂದ ಬಂದಿಲ್ಲವೆಂಬುದನ್ನು ನಾನು ಕೂಡ ಗಮನಿಸಿದ್ದೇನೆ. ಎಲ್ಲೆಲ್ಲಿ ಬಿಟ್ಟುಹೋಗಿದೆ, ಅಂತಹ ಕಡೆಗಳಲ್ಲಿ ಮುಂದಿನ ಯೋಜನೆಯಲ್ಲಿ ರೂಪಿಸುತ್ತೇನೆ.

ಶ್ರೀ ಸುಂದರರಾವ್ ಕುಂಬ್ಳೆ:- ಸನ್ಮಾನ್ಯ ಅಧ್ಯಕ್ಷರೇ, ಈ ನೇಕಾರರ ಹಿತರಕ್ಷಣೆ ಎನ್ನುವಂಥ ಕಾರ್ಯಕ್ರಮ ರಾಜ್ಯಕ್ಕೆ ಸಂಬಂಧಪಟ್ಟಿದ್ದುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಬಡ ನೇಕಾರರು ಅನೇಕರು ಇದ್ದಾರೆ. ಅಲ್ಲಿ ಕಾರ್ಯಾಗಾರವಾಗಲೀ ಅಥವಾ ಇನ್ನೊಂದು ಯಾವುದೇ ಕಾರ್ಯಕ್ರಮ ಇದ್ದರೂ ಇದ್ದ ಹಾಗೆ ಕಾಣುತ್ತಾ ಇಲ್ಲ. ನಮ್ಮ ಜಿಲ್ಲೆಯೂ ಬಿಟ್ಟುಹೋಗಿದೆ. ಪುನಃ ತಾವು ಸೇರಿಸುವಾಗ, ನಮ್ಮ ಜಿಲ್ಲೆಯನ್ನೂ ಲಕ್ಷ್ಯದಲ್ಲಿಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು:- ಅಲ್ಲಿ ಬರೀ ಮೀನುಗಾರರು ಎಂದು ಲೆಕ್ಕ ಹಾಕಿದ್ದೆವು, ನೇಕಾರರೂ ಇದ್ದಾರೆಯೇ?

ಶ್ರೀ ಎಂ.ಎಸ್.ಪಾಟೀಲ್:- ಸನ್ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟರೆ, ಅಲ್ಲಿಯೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮನೆ ಮತ್ತು ಕಾರ್ಯಾಗಾರಗಳನ್ನು ಕಟ್ಟಿಕೊಡುವಂತಾದ್ದು ಕೇಂದ್ರ ಸರ್ಕಾರದ್ದು, ದುಡ್ಡಿನ ಕೊರತೆ ಅಲ್ಲಿ ಇಲ್ಲ. ಸುದೈವದಿಂದ ಏನಾಗಿದೆ ಅಂದರೆ, ನೇಕಾರರು ಮಾತ್ರ ನಿವೇಶನ ಹೊಂದಿರಬೇಕು ಎನ್ನುವಂತಹ ಒಂದು ಷರತ್ತು ಇದೆ. ನೇಕಾರರು ಬಡವರು. ನಗರಪ್ರದೇಶಗಳಲ್ಲಿ ನಿವೇಶನ ಹೊಂದುವುದು ಅಂತೂ ಬಹಳ ತೊಂದರೆಯಾಗಿದೆ. ಅದಕ್ಕೆ ದಯವಿಟ್ಟು ಇವರನ್ನು ಆಶ್ರಯ ಯೋಜನೆ ಅಡಿಯಲ್ಲಾಗಲಿ ಅಥವಾ ಇನ್ಯಾವುದೇ ಒಂದು ಯೋಜನೆ ಅಡಿಯಲ್ಲಿಯಾಗಲಿ ಮಾಡಿ. ನಿವೇಶನ ಪುಕ್ಕಟೆಯಾಗಿ ಸಿಗುವಂತೆ ವ್ಯವಸ್ಥೆ ಮಾಡಿ ತ್ವರಿತವಾಗಿ ಮಾಡಬೇಕು. ಮಾನ್ಯ ಜಾಲಪ್ಪನವರು ಕೇಂದ್ರದಲ್ಲಿ ಟೆಕ್ಸ್‌ಟೈಲ್ಸ್ ಮಂತ್ರಿಗಳಿದ್ದಾರೆ. ಅಲ್ಲಿಂದ ಸಾಕಷ್ಟು ಫಂಡ್ಸ್ ತಂದು ನೇಕಾರರು ಇರುವಂತಹ ಎಲ್ಲಾ ಪ್ರದೇಶಗಳಲ್ಲಿ ಮನೆ ಕಟ್ಟಿಕೊಳ್ಳುವ ಕಾರ್ಯಕ್ರಮ ಹಾಕಿಕೊಳ್ಳುತ್ತೀರೋ?

ಶ್ರೀ ಎಂ.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಇದು ಯೋಗ್ಯವಾದ ಸಲಹೆ, ಸರ್ಕಾರ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ.

ವಿಷಯ:- ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಶಾಶ್ವತ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 69 (495)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ತೊಂದರೆಯಿಂದಾಗಿ ಜನರು ಪ್ರತಿಭಟನೆ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರೀತಿ ತೊಂದರೆಯಾಗಲು ಕಾರಣಗಳೇನು? ಈ ಸಮಸ್ಯೆ ನಿವಾರಣೆಗೆ ಮತ್ತು ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರೀತಿ ತೊಂದರೆಯಾಗಲು

1) ನೀರಿನ ವಿತರಣಾ ವ್ಯವಸ್ಥೆಯಲ್ಲಿ ದೋಷಗಳೇ ಕಾರಣ.

2) ಈ ಸಮಸ್ಯೆಯನ್ನು ಪರಿಹರಿಸಲು ರೂ.700 ಲಕ್ಷ ಅಂದಾಜಿನಲ್ಲಿ ''ಜಲಸಂಗ್ರಹಾಲಯ ನಿರ್ಮಾಣ ಮತ್ತು ವಿತರಣಾ ಜಾಲ ನವೀಕರಣ'' ಕೆಲಸವನ್ನು ಕೈಗೊಂಡಿದ್ದು ಶೇಕಡಾ 90ರಷ್ಟು ಕೆಲಸ ಮುಗಿದಿದ್ದು ಉಳಿದ ಕೆಲಸಗಳನ್ನು ಶೀಘ್ರದಲ್ಲಿ ಮುಗಿಸಲಾಗುವುದು. ಇದರಿಂದ ಅವಳೀ ನಗರಕ್ಕೆ ತಲಾ ದಿನಂಪ್ರತಿ 25ರಿಂದ 30 ಗ್ಯಾಲನ್ ನೀರನ್ನು ಸರಬರಾಜು ಮಾಡಲಾಗುವುದು.

3) ಇದಲ್ಲದೆ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಸರ್ಕಾರದವರು ಮಲಪ್ರಭ 2ನೇ ಹಂತದ ಯೋಜನೆಯನ್ನು ರೂ.650 ಲಕ್ಷಗಳ ಅಂದಾಜಿನಲ್ಲಿ ಕಾರ್ಯಗತಗೊಳಿಸಿ ದಿನಂಪ್ರತಿ ಒಟ್ಟು 11.00ರಿಂದ 12 ದಶಲಕ್ಷ ಗ್ಯಾಲನ್ ನೀರು ಸರಬರಾಜು ಮಾಡಲು ಸಾಧ್ಯವಾಗಿದೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ತೊಂದರೆಯುಂಟಾಗಿ, ಅಲ್ಲಿನ ಜನರಿಂದ ಪ್ರತಿಭಟನೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಅಂತ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದಕ್ಕೆ ನೀರಿನ ವಿತರಣಾ ವ್ಯವಸ್ಥೆಯಲ್ಲಿ ಇರುವ ದೋಷಗಳೇ ಕಾರಣ ಎಂದು ಹೇಳಿದ್ದಾರೆ. ಯಾವ ದೋಷಗಳು ಎನ್ನುವುದನ್ನು ಅವರು ಹೇಳಿಲ್ಲ. ಅದಕ್ಕೆ ಕಾರಣಕರ್ತರು ಯಾರು? ಆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವರೇ? ಜಲಸಂಗ್ರಹಗಳನ್ನು ಕಟ್ಟಿಸುವ ಕೆಲಸ ಶೇಕಡ 90ರಷ್ಟು ಮುಗಿದಿದೆ, ಇನ್ನೂ ಕೆಲವು ಭಾಗಗಳಲ್ಲಿ ಉಳಿದಿದೆ ಅದನ್ನು ಶೀಘ್ರವಾಗಿ ಮುಗಿಸುತ್ತೇವೆಂದು ಹೇಳಿದರು, ಹಿಂದಿನ

ನಗರಾಭಿವೃದ್ಧಿ ಸಚಿವರು ಡಿಸೆಂಬರ್ 95ರ ವೇಳೆಗೆ ಈ ಜಲಸಂಗ್ರಹಾಲಯಗಳನ್ನು ಕಟ್ಟಿ ಮುಗಿಸುತ್ತೇವೆಂದು ಹೇಳಿದ್ದರು, ಆ ಭರವಸೆ ಈಡೇರಲಿಲ್ಲ; ಆದ್ದರಿಂದ ಮಾನ್ಯ ಮಂತ್ರಿಗಳು ದಯವಿಟ್ಟು ಯಾವ ಅವಧಿಯೊಳಗೆ ಇವುಗಳನ್ನು ಕಟ್ಟಿ ಮುಗಿಸುತ್ತೀರಿ ಎನ್ನುವ ಸ್ಪಷ್ಟ ಭರವಸೆಯನ್ನು ಕೊಡಬೇಕೆಂದು ನಾನು ಕೇಳಬಯಸುತ್ತೇನೆ. ಇವತ್ತು ನೀರಿನ ಸಂಗ್ರಹ ಮಾಡುವ ಭಾಗದಿಂದ ಸವದತ್ತಿಯಿಂದ ಇನಾಂ ಹೋಂಗಲ್‌ವರೆಗೆ 270 ಹೆಚ್ಚು ವಿತರಣಾ ಪೈಪುಗಳು ಹೊಡೆದು ಹೋಗಿವೆ. ನೀರು ಸೋರುತ್ತಿರುವ ಪೈಪುಗಳನ್ನು ರಿಪೇರಿ ಮಾಡುವುದಕ್ಕೆ ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ? ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಲ್ಲಿ 7 ಲಕ್ಷ ಪ್ರಜಾಸಂಖ್ಯೆ ಇದೆ. ಮಲಪ್ರಭಾ ಒಂದನೇ ಹಂತದಲ್ಲಿ 11.75 ಲಕ್ಷ, ಎರಡನೇ ಹಂತದಲ್ಲಿ 650 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 1983ರಿಂದ 93ರವರೆಗೂ 18 ಕೋಟಿ ರೂಪಾಯಿಗಳನ್ನು ನೀರಿನ ಸಂಗ್ರಹಕ್ಕಾಗಿ ಖರ್ಚು ಮಾಡಿದ್ದೇವೆ. ಈ ಎರಡೂ ನಗರಗಳಿಗೆ 11 ದಶಲಕ್ಷ ಗ್ಯಾಲನ್ ನೀರನ್ನು ಮಲಪ್ರಭಾದಿಂದಲೂ 8 ದಶಲಕ್ಷ ಗ್ಯಾಲನ್ ನೀರನ್ನು ನೀರುಸಾಗರದಿಂದ ಒಟ್ಟು 19 ದಶಲಕ್ಷ ಗ್ಯಾಲನ್ ನೀರನ್ನು ಕೊಟ್ಟು ಪ್ರತಿಯೊಬ್ಬರಿಗೂ 100ರಿಂದ 150 ಲೀಟರ್ ನೀರನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಮುಖ್ಯವಾಗಿ ನೀರಿನ ವಿತರಣಾ ಜಾಲ ಡಿಸ್ಟ್ರಿಬ್ಯೂಷನ್ ಸಿಸ್ಟಂ ಸರಿಯಾಗಿ ಇಲ್ಲದೇ ಇರುವ ಕಾರಣ ಅದಕ್ಕೆ ವಿಶೇಷವಾಗಿ ಜೀವವಿಮಾ ನಿಗಮದಿಂದ 287 ಲಕ್ಷ, ಸರ್ಕಾರದ ಸಾಲ 413 ಲಕ್ಷ ರೂಪಾಯಿಗಳನ್ನು ಕೊಟ್ಟು ಒಟ್ಟು 7 ಕೋಟಿ ರೂಪಾಯಿಗಳಲ್ಲಿ ಆ ಕೆಲಸವನ್ನು ಗ್ರೌಂಡ್ ಲೆವೆಲ್ ರಿಜರ್ವಾಯರ್ ಮತ್ತು ಬೇರೆ ಬೇರೆ ಎಲ್ಲಾ ಡಿಸ್ಟ್ರಿಬ್ಯೂಶನ್ ಸಿಸ್ಟಂ ಮಾಡಿ, ಆ ಕಾರ್ಯ ಇವತ್ತು ಮುಕ್ತಾಯವಾಗುವ ಹಂತದಲ್ಲಿದೆ. ಇದಕ್ಕೆ ಇನ್ನೂ ಹೆಚ್ಚು 7 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮತ್ತು ಇದುವರೆಗೂ ನಗರ ಕಾರ್ಪೊರೇಷನ್‌ನವರು ಅವಳಿ ನಗರಗಳು, ಯಾರೂ ಸಹ ಒಂದು ಪೈಸೆಯನ್ನು ತುಂಬಿಲ್ಲ ಅವರು 3 ಕೋಟಿ ರೂಪಾಯಿಗಳ ವಂತಿಗೆಯನ್ನು ಬಾಕಿ ಇಟ್ಟುಕೊಂಡಿದ್ದಾರೆ. ಮಾನ್ಯ ಸದಸ್ಯರು ತಿಳಿಸಿದ ಹಾಗೆ ಅಲ್ಲಿ ಪೈಪ್ ಲೈನ್ ಹೋಗಿರುವಂತಹ ವ್ಯವಸ್ಥೆ ಏನು ಇದೆ, ಅದನ್ನೆಲ್ಲಾ ಸರಿಪಡಿಸುವಂತಹ ಕಾರ್ಯವನ್ನು ಮಾಡಿದ್ದೇವೆ. ಅಧಿಕಾರಿಗಳು ಏನು ಲೋಪ ಮಾಡಿ ದೋಷ ಮಾಡಿದ್ದಾರೆ ಅವರ ಮೇಲೆ ತೀವ್ರವಾದ ಕ್ರಮವನ್ನು ಸಹ ತೆಗೆದುಕೊಳ್ಳುತ್ತೇವೆ. ಈ ನೀರಿನ ವ್ಯವಸ್ಥೆ ಸಮರ್ಪಕವಾಗಿ ಡಿಸೆಂಬರ್ 95ಕ್ಕೆ ಮುಗಿಯುತ್ತದೆ ಅಂತ ಹೇಳಿದ್ದರು. ಅದರೆ 96 ಡಿಸೆಂಬರ್ ಅಂತ ಅಂದುಕೊಳ್ಳೋಣ. ಸಂಪೂರ್ಣ ಅವರ ಆಸೆ ಇರುವಂತಾದ್ದು ಬೆಂಗಳೂರು ನಗರ ಜಿಲ್ಲೆಗೆ ಇರುವಂತಹ ವ್ಯವಸ್ಥೆ ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೂ ಇರಬೇಕು ಎನ್ನುವಂತಹದ್ದು. ಮಾನ್ಯ ಸದಸ್ಯರು ಮನಸ್ಸಿನಲ್ಲಿ ಇರುವಂಥಾದ್ದು ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ.

ಶ್ರೀ ಅಶೋಕ್ ಕಾಟ್ವೆ:- ಮಾನ್ಯ ಅಧ್ಯಕ್ಷರೇ, ಎರಡನೇ ಹಂತದ ಯೋಜನೆ

ಯಾವಾಗ ಸಂಪೂರ್ಣವಾಗುತ್ತದೆ. ಆಮೇಲೆ ಎರಡು ಗ್ರೌಂಡ್ ಲೆವೆಲ್ ರಿಜರ್ವಾಯರ್ ಮತ್ತು 8 ಓವರ್ ಹೆಡ್ ಟ್ಯಾಂಕ್‌ಗಳು ಹುಬ್ಬಳ್ಳಿ ನಗರದಲ್ಲಿ ಮಾಡಲಾಗಿದೆ. ಈ 8 ಓವರ್‌ಹೆಡ್ ಟ್ಯಾಂಕ್‌ಗಳು ಮತ್ತು ಎರಡು ರಿಜರ್ವಾಯರ್‌ನಲ್ಲಿ ಹೆಚ್ಚು ಸೋರುತ್ತಿವೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿರಿ. ಮತ್ತು ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಹೆಚ್ಚುತ್ತಿರುವ ಜನಸಂದಣಿಯನ್ನು ನೋಡುತ್ತಿದ್ದರೆ, 6-7 ದಿವಸಕ್ಕೆ ನೀರು ಬಿಡುತ್ತಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಮೂರನೇ ಹಂತದ ಕಾಳಿನದಿ ಯೋಜನೆ ತೆಗೆದಕೊಳ್ಳುವ ಯೋಜನೆ ಇದೆಯೇ ಇದ್ದರೆ ಯಾವಾಗ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ.ಎನ್.ಬಚ್ಚೇಗೌಡ:- ಕಾಳಿ ನದಿಯೋಜನೆ ತೆಗೆದುಕೊಳ್ಳುವಂಥಾದ್ದು ನಮ್ಮ ಮುಂದೆ ಇಲ್ಲ. ಇರತಕ್ಕಂಥ ನೀರೇ ಸಾಕಾಗಿದೆ. ಇರತಕ್ಕಂಥ ನೀರನ್ನು ಡಿಸ್ಟ್ರಿಬ್ಯೂಶನ್ ಸಿಸ್ಟಂ, ಜಲಸಂಗ್ರಹ ಮತ್ತು ವಿತರಣಾ ವ್ಯವಸ್ಥೆಯಿಂದ ಸರಿಪಡಿಸಬೇಕು. ಮೈನ್ ಪೈಪ್ ಸೋರುವಿಕೆ ಕೆಲವು ಭಾಗಗಳಲ್ಲಿ ಟ್ಯಾಂಕ್‌ಗಳನ್ನು ಸರಿಪಡಿಸುವಂತಾದ್ದು ಇಂತಹ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡು ಶೀಘ್ರದಲ್ಲಿಯೇ ಆ ವ್ಯವಸ್ಥೆಯನ್ನು ಸರಿಪಡಿಸುತ್ತೇವೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ನಗರದ ನೀರು ಪೂರೈಕೆಯ ಮೊದಲನೇ ಹಂತದ ಪೈಪ್‌ಲೈನ್ ಏನು ಇದೆ, ಇದು 1985ರಿಂದಲೂ ಅನೇಕ ಕಡೆ ಸೋರುತ್ತಿದೆ ಎನ್ನುವಂತಾದ್ದು ನಾನು ಮೊದಲು ಶಾಸಕನಾಗಿದ್ದಾಗಿನಿಂದಲೂ ಆದರ ಬಗ್ಗೆ ತಕರಾರು ಇದೆ. ಮೊದಲನೇ ಯೋಜನೆಯಲ್ಲಿ ಪೈಪ್‌ಲೈನ್ ಏನು ಇದೆ, ಇಂಜಿನೀಯರ್ಸ್ ಏನು ಮಾಡಿದ್ದಾರೆ ಅದರಲ್ಲಿಯೇ ಸಾಕಷ್ಟು ದೋಷ ಇದೆ. ಇದರಿಂದ ನೀರು ಸೋರುವಿಕೆಯ ಪ್ರಮಾಣ ಕಡಿಮೆಯಾಗುತ್ತಿಲ್ಲ. ಜಲಮಂಡಲಿಯವರು ಬಂದ್ ಮಾಡುತ್ತಲೇ ಇದ್ದಾರೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸೋರುತ್ತಲೇ ಇದೆ. ಸಾಧಾರಣವಾಗಿ 1985ರಿಂದ ಇಲ್ಲಿಯವರೆಗೂ ಸಂಖ್ಯೆ ನೋಡಿ. ಎಷ್ಟು ಪ್ರಮಾಣದಲ್ಲಿ ನೀರು ಸೋರುತ್ತಿದೆ, ಎಷ್ಟು ಪ್ರಮಾಣದಲ್ಲಿ ನೀರು ವೇಸ್ಟ್ ಆಗಿ ಹೋಗುತ್ತಿದೆ, ಮೊದಲನೇ ಹಂತದ ನೀರು ಪೂರ್ಣ ಬಂದಿದ್ದರೆ, ಹುಬ್ಬಳ್ಳಿ ಧಾರವಾಡ ನಗರಕ್ಕೆ ನೀರು ಸಾಕಷ್ಟು ಪೂರೈಕೆ ಆಗಬಹುದಿತ್ತು. ಆದರೆ ಅದು ಬ್ಲಾಕ್ ಸಾಯಿಲ್ ವಾಟರ್ ಇರುವುದರಿಂದ ನೀರು ಅನೇಕ ಕಡೆಗೆ ಸೋರುತ್ತಲೇ ಇದೆ, ಅದನ್ನು ಪೂರ್ಣ ಬಂದ್ ಮಾಡುವಂತಹ ವ್ಯವಸ್ಥೆ ಮಾಡಲಿಲ್ಲ, ಜಲಮಂಡಲಿಯವರು ಹಣ ಖರ್ಚು ಮಾಡಿ ಸೋರುವಿಕೆಯನ್ನು ಇನ್ನೂ ಹೆಚ್ಚು ಮಾಡುತ್ತಿದ್ದಾರೆಯೇ ಹೊರತು ಇನ್ನೇನು ಆಗಲಿಲ್ಲ. ಆದ್ದರಿಂದ ಅದನ್ನು ನಿಲ್ಲಿಸುವಂತಹ ಕ್ರಮ ಯಾವಾಗ ತೆಗೆದುಕೊಳ್ಳುತ್ತೀರಿ? ಪೂರ್ಣನೀರು ಸೋರುವುದನ್ನು ನಿಲ್ಲಿಸುವ ಕೆಲಸವನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕು. ವಿತರಣೆಯಲ್ಲಿ ಏನು ದೋಷ ಇದೆ, ಆ ಅಧಿಕಾರಿಗಳ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಹುಬ್ಬಳ್ಳಿ ಧಾರವಾಡಕ್ಕೆ ಹೋಗಿಲ್ಲ, ನಾನು ಸ್ಥಳಪರಿಶೀಲನೆ ಮಾಡಿ ಮಾನ್ಯ ಸದಸ್ಯರು ಏನೇನು

ತಿಳಿಸುತ್ತಾರೋ ನೋಡಿ ಅದರ ಬಗ್ಗೆ ಕ್ರಮ ಜರುಗಿಸುತ್ತೇನೆ.

ಶ್ರೀ ಅಶೋಕ್ ಕಾಟ್ವೆ:- ಮಾನ್ಯ ಅಧ್ಯಕ್ಷರೇ, ವಿದ್ಯುತ್ ಅಭಾವದಿಂದಲೂ ಸಹ ನೀರಿನ ಪೂರೈಕೆ ಕಡಿಮೆ ಆಗುತ್ತಿದೆ. ವೋಲ್ಟೇಜ್ ಕಡಿಮೆ ಆಗುತ್ತಿರುವುದರಿಂದ 15 ದಿವಸಕ್ಕೆ ಒಮ್ಮೆ, ತಿಂಗಳಿಗೆ ಒಮ್ಮೆ ನೀರು ಬಿಡುವ ಕಾರ್ಯಕ್ರಮ ಆಗುತ್ತಿದೆ. ಆದ್ದರಿಂದ ಮಾನ್ಯ ಸಚಿವರು ಕೆ.ಇ.ಬಿ. ಅಧಿಕಾರಿಗಳಿಗೂ ಸ್ಪಷ್ಟವಾದ ಆದೇಶ ಕೊಡಬೇಕು ವಾಟರ್ ಸಪ್ಲೈಗೆ ಯಾವುದೇ ರೀತಿಯಿಂದ ವಿದ್ಯುತ್ ತೊಂದರೆ ಆಗಬಾರದು, ನೀರು ಪೂರೈಕೆ ಮಂಡಲಿ ಮತ್ತು ಕಾರ್ಪೊರೇಷನ್ ಅಧಿಕಾರಿಗಳ ನಡುವೆ ಅಸಹಕಾರ ಇದೆ. ಆದ್ದರಿಂದ ಅವರಲ್ಲಿ ಸಾಮರಸ್ಯವನ್ನು ಮೂಡಿಸಿ, ಆ ಅಧಿಕಾರಿಗಳ ಮೇಲೆ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:- ತಾವು ಒಂದು ಕೆಲಸ ಮಾಡಿ ಬಚ್ಚೇಗೌಡರೆ, ಹುಬ್ಬಳ್ಳಿ ಧಾರವಾಡ ಮಹಾನಗರದ ಸದಸ್ಯರುಗಳು ಯಾರು ಇದ್ದಾರೆ, ಅವರನ್ನು ಕರೆಸಿ ಅಧಿಕಾರಿಗಳನ್ನು ಕರೆಸಿ ಅವರ ಸಮಸ್ಯೆ ಪರಿಹಾರ ಮಾಡಿ.

ವಿಷಯ:- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಕೈಗಾರಿಕಾ ಶೆಡ್ಡುಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 70 (371)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1994-95, 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ನಿರ್ಮಾಣವಾದ ಒಟ್ಟು ಕೈಗಾರಿಕಾ ಶೆಡ್ಡುಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಮಂಜೂರಾದ ಶೆಡ್ಡುಗಳೆಷ್ಟು?

ಇ) ಆ ಜನಾಂಗದವರಿಗೆ ಬೆಲೆಯಲ್ಲಿ ನೀಡಿದ ರಿಯಾಯಿತಿಯ ಪ್ರಮಾಣವೆಷ್ಟು?

ಶ್ರೀ ಬಿ.ಎ.ಮೊಯಿಯುದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ)	1994-95	186
	1995-96	257
	ಒಟ್ಟು	443
ಆ)	1994-95	27
	1995-96	64
	ಒಟ್ಟು	91